likely to be spoiled. I therefore, urge upon the Government to make arrangement for appointment of at least 150 Urdu Primary School Teachers before the end of June 1988.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಬೀದರ್ ಜಿಲ್ಲೆಯಲ್ಲಿ ಒಟ್ಟು ೩೧ ಸರ್ಕಾರಿ ಉರ್ದು ಮಾಧ್ಯಮ ಪ್ರಾಥಮಿಕ ಶಾಲೆಗಳಿವೆ. ಸದರಿ ಶಾಲೆಗಳಲ್ಲಿ ೧೮೫ ಶಿಕ್ಷಕರು ಕೆಲಸ ಮಾಡುತ್ತಿರುತಾರೆ. ಆಲ್ಲದೆ ೨೬ ಶಾಲೆಗಳಲ್ಲಿ ಒಂದೊಂದು ವರ್ಗ (ಸೆಕ್ಷನ್) ನಲ್ಲಿಉರ್ದು ಮಾಧ್ಯಮದಲ್ಲಿ ಭೋದಿಸಲಾಗುತ್ತಿದೆ. ಈ ಎಲ್ಲಾಶ ಶಾಲೆಗಳಲ್ಲಿ ಒಟ್ಟು ೪೧೩ ಶಿಕ್ಷಕರು ಕೆಲಸ ಮಾಡುತ್ತಿದ್ದಾರೆಂದು ನಿರ್ದೇಶಕರಂ ವರದಿ ಮಾಡಿರುತ್ತಾರೆ. ಪ್ರಸ್ತುತ ಕೇವಲ ೨ ಉರ್ದು ಶಿಕ್ಷಕರ ಹುದ್ದೆಗಳೂ ಒಂದು ಕನ್ನಡ ಶಿಕ್ಷಕರ ಹುದ್ದೆಗಳು ಖಾಲಿ ಇರುತ್ತದೆ. ಈ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲು ಕ್ರಮ ತೆಗೆದುಕೊಳ್ಳಲಾಗುವುದು.

ಬೀದರ್ ಜಿಲ್ಲೆಯಲ್ಲಿ ಒಟ್ಟು ೧೦೪ ಉರ್ದು ಹೆಚ್ಚುವರಿ ಶಿಕ್ಷಕರ ಹುದ್ದೆಗಳ ಅವಶ್ಯಕತೆ ಇದ್ದು ಐದಾರು ವರ್ಷಗಳಿಂದ ಹೆಚ್ಚುವರಿ ಶಿಕ್ಷಕರ ಹುದ್ದೆಗಳು ಮಂಜೂರಾಗದ ಕಾರಣ ಶಿಕ್ಷಕರನ್ನು ಒದಗಿಸಲಾಗಿಲ್ಲ. ಪ್ರಸ್ತುತ ೮೦೦೦ ಪ್ರಾಥಮಿಕ ಶಾಲಾ ಶಿಕ್ಷಕರ ಹುದ್ದೆಗಳನ್ನು ಮಂಜೂರಾತಿ ಮಾಡುವ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸುತ್ತಿದ್ದು, ಮಂಜೂರಾತಿ ಮಾಡಿದ ಕೂಡಲೇ ಅವಶ್ಯಕತೆಗನುಸಾರವಾಗಿ ಶಿಕ್ಷಕರನ್ನು ಒದಗಿಸಲಾಗುವುದು.

ಶ್ರೀ ಬಿ. ಲಕ್ಕಪ್ಪ) ಸದಸ್ಯರು ಗೈರು ಹಾಜರು
ಶ್ರೀ ಜಿ. ಎಂ. ಕಾನಡೆ)

೧೦) ದಾವಣಗೆರೆಯಂ ಹೊಸ ಬಸ್ ನಿಲ್ದಾಣವನ್ನು ಪ್ರಾರಂಭಿಸಂವುದು

ಶ್ರೀ ಪಂಪಾಪತಿ (ದಾವಣಗೆರೆ).— ಮಾನ್ಯ ಅಧ್ಯಕ್ಷರೇ, ದಾವಣಗೆರೆ ಸುಮಾರು ೩೫ ವರ್ಷಗಳ ಹಿಂದೆ ನಿರ್ಮಿಸಿದಂತೆ ಬಸ್ ನಿಲ್ದಾಣದಲ್ಲಿ ಈಗಲೂ ಕಾರ್ಯ ನಿರ್ವಹಿಸುತ್ತದೆ. ಈಗ ದಾವಣಗೆರೆ ಮೊದಲಿಗಿಂತ ನಾಲ್ಕು ಪಟ್ಟು ಜನ ಸಂಖ್ಯೆ ಹೆಚ್ಚಾಗಿದೆ. ಇದನ್ನು ಮನಗಂಡ ನಮ್ಮ ರಾಜ್ಯಸರ್ಕಾರ ಒಂದು ಕೋಟಿ ರೂಪಾಯಿಗಳಿಗೂ ಹೆಚ್ಚು ಹಣ ಖರ್ಚು ಮಾಡಿ ಒಂದು ಹೊಸ ಬಸ್ ನಿಲ್ದಾಣವನ್ನು ನಿರ್ಮಿಸಿರುತ್ತಾರೆ. ಈಗಾಗಲೇಹೊಸ ಬಸ್ ನಿಲ್ದಾಣದ ಕೆಲಸ ಮುಗಿದಿದೆ. ಆದ್ದರಿಂದತಾವು ಈಕೂಡಲೇ ಹೊಸ ಬಸ್ ನಿಲ್ದಾಣವನ್ನು ಪ್ರಾರಂಭಿಸುವ ತಾರೀಖಿನ್ನು ಗೊತ್ತುಪಡಿಸಬೇಕೆಂದು ದಾವಣಗೆರೆಯ ಬಸ್ ನಿಲ್ದಾಣವನ್ನು ಸಾರ್ವಜನಿಕರಿಗೆ ಒದಗಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಪಿ. ಜಿ. ಆರ್. ಸಿಂಧ್ಯಾ (ಮಾನ್ಯ ಸಾರಿಗೆ ಸಚಿವರು).— ಅಧ್ಯಕ್ಷರೇ, ದಾವಣಗೆರೆ ಹೊಸ ಬಸ್ ನಿಲ್ದಾಣವನ್ನು ದಿನಾಂಕ ೧೫-೮-೧೯೮೮ರಂದು ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುವುದು.

೧೧) ಎಸ್.ಎಸ್.ಎಲ್ ಸಿ. ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸಾದ ಮಕ್ಕಳಿಗೆ ಪಿ.ಯು.ಸಿ. ತರಗತಿಗೆ ಸೀಟನ್ನು ಕಾಯ್ದಿರಿಸುವುದು

ಶ್ರೀ ಬ್ಲೇಸಿಯಸ್ ಎಂ. ಡಿಸೌಜ (ಮಂಗಳೂರು).— ಮಾನ್ಯ ಅಧ್ಯಕ್ಷರೇ, ಈ ವರ್ಷ ಎಸ್.ಎಸ್.ಎಲ್ ಸಿ. ಫಲಿತಾಂಶ ಚೆನ್ನಾಗಿದ್ದು ಪ್ರೀ-ಯೂನಿವರ್ಸಿಟಿ ತರಗತಿಗೆ ಸೇರುವ ವಿದ್ಯಾರ್ಥಿಗಳ ಒತ್ತಡ ಹೆಚ್ಚಾಗಿದೆ. ಈ ರೀತಿಯಾಗಿ ಎಸ್.ಎಸ್.ಎಲ್.ಸಿ. ಪಾಸಾದ ಮಕ್ಕಳು ಸೀಟಿಗಾಗಿ ಪರದಾಡುವ ಸ್ಥಿತಿಯಿಂಟಾಗಿದೆ ಆಲ್ಲದೆ ಎಸ್ ಎಸ್ ಎಲ್ ಸಿ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸಾಗುವವರಿಗೂ ಕೆಲವು ಸೀಟುಗಳನ್ನು ಕಾದಿರಿಸಬೇಕೆಂದು ಸರಕಾರ ಸೂಚಿಸಿದೆ. ಆದರೆ ಪ್ರಥಮ ಪ್ರಯತ್ನದಲ್ಲಿ ಪಾಸಾಗಿರುವ ಮಕ್ಕಳಿಗೆ ಸೀಟು ದೊರಕಲೇ ಬೇಕು. ಆದ್ದರಿಂದ ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪಾಸಾಗುವವರಿಗೂ ಸೀಟು ಕೊಡಬೇಕಾದಲ್ಲಿ ಈಗಿರುವ ಸೀಟುಗಳ ಸಂಖ್ಯೆಯನ್ನು ಹೆಚ್ಚಿಸಲೇಬೇಕು ಹಾಗೂ ಒಂದೊಂದು ಸೆಕ್ಷನ್ ಹೆಚ್ಚಿಸುವ ಅವಕಾಶವನ್ನೂ ಕಲ್ಪಿಸಬೇಕು. ಪ್ರಥಮ ಪ್ರಯತ್ನದಲ್ಲಿ

ಪಾಸಾದವರಿಗೆ ಅನ್ಯಾಯವಾಗದ ರೀತಿಯಲ್ಲಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು).— ಮಾನ್ಯ ಅಧ್ಯಕ್ಷರೇ, ಎರಡೂ ಪರೀಕ್ಷೆಗಳಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಯಾವ ರೀತಿಯಲ್ಲೂ ತೊಂದರೆ ಆಗದ ರೀತಿಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇವೆ. ಮತ್ತು ಅವಶ್ಯ ಬಿದ್ದರೆ ಹೆಚ್ಚುವರಿ ಸೆಕ್ಷನ್ ಗಳನ್ನು ಕೊಡುವ ಕೆಲಸವನ್ನೂ ಸರ್ಕಾರ ಮಾಡುತ್ತದೆ.

12. ಉಡುಪಿ ಕ್ಷೇತ್ರದ ಹಿರಿಯಡ್ಕದಲ್ಲಿ ಸರ್ಕಾರಿ ಪದವಿ ಪೂರ್ವ ಕಾಲೇಜಿನ ವಿಜ್ಞಾನ ವಿಭಾಗವನ್ನು ತರೆಯಲು ಒತ್ತಾಯ

ಶ್ರೀಮತಿ ಮನೋರಮಾ ಮಧ್ವಾರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೇ, ಉಡುಪಿ ಕ್ಷೇತ್ರದ ಹಿರಿಯಡ್ಕದಲ್ಲಿರುವ ಸರಕಾರಿ ಪದವಿಪೂರ್ವ ಕಾಲೇಜಿನಲ್ಲಿ ವಿಜ್ಞಾನವಿಭಾಗ ತೆರೆಯಬೇಕೆಂದು ವಿದ್ಯಾರ್ಥಿ ಮಾನಿಗಳ ಬಹುದಿನಗಳ ಬೇಡಿಕೆ, ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಹಿರಿಯಡಕ ಕೇಂದ್ರ ಸ್ಥಾನ. ಸ್ಥಳಾವಕಾಶಕ್ಕೆ ಒತ್ತಡ ಇರುವ ಉಡುಪಿಯಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಸ್ಥಳ ದೊರಕುವುದು ಕಷ್ಟ. ಸಿಕ್ಕಿದರೂ ವಿಪರೀತ ವೆಚ್ಚ. ವಿಜ್ಞಾನ ವಿಭಾಗದ ಪ್ರಯೋಗ ಶಾಲೆ ಒದಗಿಸಲು ಊರವರು ಹಣ ಸಂಗ್ರಹಿಸಿದ್ದಾರೆ. ಮನವಿಯನ್ನು ಕೂಡ ಸಲ್ಲಿಸಲಾಗಿದೆ. ಈ ತನಕ ಮಂಜೂರಾತಿ ಆಜ್ಞೆ ದೊರೆತಿಲ್ಲ. ಸರ್ಕಾರ ಮಕ್ಕಳ ಭವಿಷ್ಯದ ಕುರಿತು ಚಿಂತನೆ ಮಾಡಬೇಕಲ್ಲದೆ, ಬರೇ ಭಿನ್ನಮತದ ಕುರಿತಾದ ಚಿಂತನೆ ಅಲ್ಲ. ಹಿರಿಯಡಕ ಪದವಿಪೂರ್ವ ಕಾಲೇಜಿಗೆ ವಿಜ್ಞಾನ ವಿಭಾಗ ಬೇಕೆಂಬ ಬಗ್ಗೆ ಯಾವ ಭಿನ್ನಮತವೂ ಇಲ್ಲ. ಈ ಕುರಿತಾದ ಮಂಜೂರಾತಿ ಆಜ್ಞೆ ಕೂಡಲೇ ನೀಡಿ, ವಿಜ್ಞಾನ ವಿಭಾಗ ಆರಂಭಿಸಬೇಕು. ಹಿರಿಯಡಕದವರ ಹಿರಿಯಾಸೆ ಈಡೇರಬೇಕು. ಉನ್ನತ ವಿದ್ಯಾಭ್ಯಾಸದ ಅಪೇಕ್ಷೆಯ ಆಕ್ರಂದನ ಆರಣ್ಯ ರೋಧನವಾಗಬಾರದು ಎಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಬಿ. ಸೋಮಶೇಖರ್ (ಪ್ರಾಥಮಿಕ ಮತ್ತು ಮಾಧ್ಯಮಿಕ ವಿದ್ಯಾ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಮಾನ್ಯ ಉನ್ನತ ಶಿಕ್ಷಣ ಸಚಿವರ ಪರವಾಗಿ ಉತ್ತರವನ್ನು ಓದಂತ್ತೇನೆ.

ಉಡುಪಿ ಕ್ಷೇತ್ರದ ಹಿರಿಯಡಕದಲ್ಲಿರುವ ಸರ್ಕಾರಿ ಪದವಿಪೂರ್ವ ಕಾಲೇಜಿನಲ್ಲಿ ವಿಜ್ಞಾನ ವಿಭಾಗ ತೆರೆಯಬೇಕೆಂಬ ಪ್ರಸ್ತಾವನೆ ಸರ್ಕಾರಕ್ಕೆ ಬಂದಿರುವುದಿಲ್ಲ. ಆದರೆ ಇಂತಹ ಮನವಿಗಳು ಬೇರೆ ಕಾಲೇಜಿನಿಂದ ಬಂದಿದ್ದು. ಆರ್ಥಿಕ ಕೊರತೆಯಿಂದಾಗಿ ತಿರಸ್ಕೃತವಾಗಿವೆ.

ವಿಜ್ಞಾನ ವಿಭಾಗವನ್ನು ಒಂದು ಕಾಲೇಜಿನಲ್ಲಿ ತೆರೆಯಲು ನಾಲ್ಕು ಉಪನ್ಯಾಸಕರ ಹುದ್ದೆಗಳು ಸೃಷ್ಟಿಯಾಗಬೇಕಾಗುತ್ತದೆ ಮತ್ತು ಈ ಕೆಳಗಿನಂತೆ ವೆಚ್ಚ ಬರುತ್ತದೆ.

೧)	ಉಪನ್ಯಾಸಕರು	ರೂ. ೧,೫೨,೧೬೦
೨)	ಲ್ಯಾಬ್ ಅಟೆಂಡರ್	೧೨,೦೦೦
೩)	ಪ್ರಯೋಗಾಲಯಂದ ಉಪಕರಣಗಳು	೧,೦೦,೦೦೦
	ಒಟ್ಟು	ರೂ. ೨,೬೪.೧೬೦ (೧ ವರ್ಷಕ್ಕೆ)

ಈ ವೆಚ್ಚವನ್ನು ಯೋಜನೆಯಡಿ ಭರಿಸಬೇಕಾಗುತ್ತದೆ. ಆರ್ಥಿಕ ಪರಿಸ್ಥಿತಿ ಸುಧಾರಿಸಿದ ಕೂಡಲೆ ಪದವಿಪೂರ್ವ ಕಾಲೇಜುಗಳಲ್ಲಿ ವಿಜ್ಞಾನ ವಿಭಾಗ ತೆರೆಯಬೇಕೆಂಬ ಮನವಿಯನ್ನು ಪರಿಶೀಲಿಸಲಾಗುವುದು.